ಕ್ರ. ಸಂ.	ಯೋಜನೆ	ಒಂದು ಯೂನಿಟ್ ದರ (ರೂ.ಗಳಲ್ಲಿ)
1	ಎಂಎನ್ಆರ್ಇ ಯಿಂದ ಶೇಕಡಾ 30 ರಷ್ಟು ಸಹಾಯಧನವನ್ನು ಪಡೆಯದೇ ಇರುವ ಸೌರ ಘಟಕಕ್ಕೆ	9.56
2	ಎಂಎನ್ಆರ್ಇ ಯಿಂದ ಶೇಕಡಾ 30 ರಷ್ಟು ಸಹಾಯಧನವನ್ನು ಪಡೆಯುವ ಘಟಕಕ್ಕೆ	7.20

ಕೃಷಿ ಮಹಾವಿದ್ಯಾಲಯ ಸ್ಥಾಪನೆ

924 (1671); ಶ್ರೀ ಇಕ್ಬಾಲ್ ಅನ್ಸಾರಿ (ಗಂಗಾವತಿ)

(ಅ) ಕೊಪ್ಪಳ ಜಿಲ್ಲೆಯ ಗಂಗಾವತಿ ವಿಧಾನಸಭಾ ಕ್ಷೇತ್ರವು ಭತ್ತದ ನಾಡು ಎಂದು ಪ್ರಸಿದ್ಧಿ ಪಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಗಂಗಾವತಿ ನಗರದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಇದ್ದಲ್ಲಿ, ಕೃಷಿ ಮಹಾವಿದ್ಯಾಲಯವನ್ನು ಯಾವಾಗ ಸ್ಥಾಪಿಸಲಾಗುವುದು? (ವಿವರ ನೀಡುವುದು)

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ರಾಜ್ಯ ಸಚಿವರು)

(ಅ) ಗಂಗಾವತಿಯ ಕೃಷಿ ಸಂಶೋಧನಾ ಕೇಂದ್ರದ ಪ್ರದೇಶದಲ್ಲಿ ಮುಖ್ಯವಾಗಿ ಪ್ರತಿ ಹೆಕ್ಟೇರ್‌ಗೆ 6.5 ಟನ್ನಿನಷ್ಟು ಭತ್ತವನ್ನು ಬೆಳೆಯುತ್ತಿದ್ದು ರಾಜ್ಯದಲ್ಲಿ ಅತಿ ಹೆಚ್ಚಿನ ಇಳುವರಿಯಾಗಿದೆ.

(ಆ) ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಕೃಷಿ ಮಹಾವಿದ್ಯಾಲಯವನ್ನು (ಅಗ್ರಿಕಲ್ಚರ್ ಕಾಲೇಜ್) ರೂ. 46.50 ಕೋಟಿ

ವೆಚ್ಚದಲ್ಲಿ ಸ್ಥಾಪಿಸಲು ತಾತ್ವಿಕ ನಿರ್ಣಯ ಕೈಗೊಂಡು ದಿನಾಂಕ 24.01.2013ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಈ ಆದೇಶ ದಂತೆ 60 ಬೋಧಕ ವಸ್ತು 139 ಬೋಧಕೇತರ ವೃಂದದ ಹುದ್ದೆ ಗಳನ್ನು ಸೃಜಿಸಲು ಅನುಮತಿ ನೀಡಿರುತ್ತದೆ.

ಕೃಷಿ ಇಲಾಖೆಗೆ ಸೇರಿರುವ ಗಂಗಾವತಿಯ ವಡ್ಡರಹಟ್ಟಿ ಕ್ಯಾಂಪ್‌ನಲ್ಲಿರುವ ಕೃಷಿ ತರಬೇತಿ ಕೇಂದ್ರದ ಸ್ವಲ್ಪ ಜಮೀನು ಹಾಗೂ ಖಾಲೀ ಕಟ್ಟಡಗಳನ್ನು ಮೇಲಿನ ಉದ್ದೇಶಕ್ಕಾಗಿ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿಕೊಡುವ ಬಗ್ಗೆ ಕೃಷಿ ಆಯುಕ್ತರೊಂದಿಗೆ ಸಮಾಲೋಚಿಸ ಲಾಗುತ್ತಿದೆ.

(ಇ) ಈ ನಡುವೆ ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳನ್ನು ಬಲಪಡಿಸುವ ಮತ್ತು ಹೊಸ ಕಾಲೇಜುಗಳನ್ನು ತೆರೆಯುವ ಬಗ್ಗೆ ಅಮುಕಾ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಪರಿಣಿತ ಸಮಿತಿ ಪರಿಶೀಲಿಸುತ್ತಿದ್ದು ಸಮಿತಿಯ ನಿರ್ಣಯವನ್ನು ನಿರೀಕ್ಷಿಸಲಾಗಿದೆ.

ಅನುದಾನದ ಲಭ್ಯತೆಗೆ ಅನುಗುಣವಾಗಿ ಕೃಷಿ ಕಾಲೇಜನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು.

ತೋಟಗಾರಿಕಾ ಬೆಳೆಗಳು

925 (1495); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

(ಅ) ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳಾವುವು, ಸದರಿ ಬೆಳೆಗಳನ್ನು ಬೆಳೆಯಲು ಸರ್ಕಾರವು ರೈತರಿಗೆ ಉತ್ತೇಜಿಸಲು ತೆಗೆದುಕೊಂಡಿರುವ ಸುದಾರಣಾ ಕ್ರಮಗಳೇನು;

(ಆ) ಬೇರೆ ರಾಜ್ಯಗಳಿಗೆ ಹೋಲಿಸಿದ್ದಲ್ಲಿ, ರಾಜ್ಯವು ತೋಟಗಾರಿಕಾ ಬೆಳೆಗಳಲ್ಲಿ ವಿಫಲತೆ ಕಾಣಲು ಸದರಿ ಬೆಳೆಗಳಿಗೆ ಬೇಕಾದ ಮೂಲಭೂತ